# 4

# ಯೇಸುವು ಬಾಪ್ತಿಸ್ಮ ಹೊಂದಿದನು

*"ಆ ದಿನಗಳಲ್ಲಿ ಯೇಸು ಗಲಿಲಾಯ ಸೀಮೆಗೆ ಸೇರಿದ ನಜರೇತೆಂಬ ಊರಿನಿಂದ ಬಂದು ಯೊರ್ದನ್ ಹೊಳೆಯಲ್ಲಿ ಯೋಹಾನನಿಂದ ಬಾಪ್ತಿಸ್ಮ ಹೊಂದಿದನು. ಬಾಪ್ತಿಸ್ಮ ಹೊಂದಿದ ಕೂಡಲೆ ಆತನು ನೀರಿನೊಳಗಿಂದ ಮೇಲಕ್ಕೆ ಬರಲು ಆಕಾಶವೊಡೆದು ಪರಿಶುದ್ಧಾತ್ಮವು ಪಾರಿವಾಳದ ಹಾಗೆ ತನ್ನ ಮೇಲೆ ಇಳಿಯುವದನ್ನು ಕಂಡನು. ಮತ್ತು - 'ನೀನು ನನ್ನ ಪ್ರಿಯ ಕುಮಾರನು, ನಿನ್ನಲ್ಲಿ ನಾನು ಆನಂದಿಸುತ್ತಾಯಿದ್ದೇನೆ ಎಂದು ಪರಲೋಕದಿಂದ ಧ್ವನಿ ಕೇಳಿಸಿತು' " (ಮಾರ್ಕ 1:9-11).*

ಯೇಸು ಸ್ವೀಕರಿಸಿದ ಬಾಪ್ತಿಸ್ಮವು ಯೋಹಾನನ ಬಾಪ್ತಿಸ್ಮವಾಗಿತ್ತು (ಅಪೊಸ್ತಲರ ಕೃತ್ಯ 1:21, 22). ತನ್ನ ಆರೋಹಣದ ನಂತರ ಯೇಸು ತನ್ನ ಅನುಯಾಯಿಗಳಿಗೆ ಮಾಡಲು ಹೇಳಿದ ಬಾಪ್ತಿಸ್ಮದೊಂದಿಗೆ ಇದನ್ನು ಗಲಿಬಿಲಿಗೊಳಿಸಬಾರದು. ಈ ಎರಡನೆಯ ಬಾಪ್ತಿಸ್ಮವು "ಯೇಸುವಿನ ಬಾಪ್ತಿಸ್ಮ" ಇಲ್ಲವೇ "ಹೊಸ ಒಡಂಬಡಿಕೆಯ ಬಾಪ್ತಿಸ್ಮ" ಎಂದು ಹೇಳಲ್ಪಟ್ಟಿದೆ.

## ಯೇಸುವಿನ ಬಾಪ್ತಿಸ್ಮದ ಬಗ್ಗೆ ಕೆಲವರು ಏನು ಹೇಳಿದ್ದಾರೆ

ಯೇಸುವಿಗೆ ಯೋಹಾನನು ಮಾಡಿಸಿದ ಬಾಪ್ತಿಸ್ಮದ ಬಗ್ಗೆ ಒಂದು ಧಾರ್ಮಿಕ ಗುಂಪು ಹೀಗೆ ಬರೆದಿದೆ, "ಭೂಲೋಕದಲ್ಲಿ ತನ್ನ ತಂದೆಗಾಗಿ ಆತನ ವಿಶೇಷ ಕಾರ್ಯಮಾಡುವದಕ್ಕಾಗಿ ಯೆಹೋವನಿಗೆ ತನ್ನನ್ನು ಅರ್ಪಿಸಿದ್ದಕ್ಕೆ ಅದು ಸಂಕೇತವಾಗಿರುವುದು."[1]

ಎರಡನೆಯ ಅಭಿಪ್ರಾಯವು ಹೀಗಿದೆ, "ಯೇಸುವು ಬಾಪ್ತಿಸ್ಮ ಹೊಂದಿದಂತೆ ನಾವು ಬಾಪ್ತಿಸ್ಮ ಹೊಂದಬೇಕು," ಹಾಗೂ "ಯೇಸುವು ಸರಿಯಾದದ್ದನ್ನು ಮಾಡುವದಕ್ಕಾಗಿ ಇಲ್ಲವೇ ದೇವರ ಚಿತ್ತವನ್ನು ನೆರವೇರಿಸುವದಕ್ಕಾಗಿ ಬಾಪ್ತಿಸ್ಮ ಹೊಂದಿದನು."[2] ಈ ವಿಧಾನವು ಬಾಪ್ತಿಸ್ಮ ಹೊಂದುವದಕ್ಕಾಗಿ ಯೇಸುವಿನ ಒಂದು ಉದ್ದೇಶವನ್ನಾಗಿ ದೇವರಿಗೆ ವಿಧೇಯತೆಯನ್ನು ದೃಷ್ಟಿಸುತ್ತದೆ. ಯೋಹಾನನಿಂದಾದ ಯೇಸುವಿನ ಬಾಪ್ತಿಸ್ಮವು ನಮ್ಮ ಬಾಪ್ತಿಸ್ಮಕ್ಕೆ ಸಮನಾಗಿದೆ ಎಂದು ಅನಂತರದಲ್ಲಿ ಹೇಳಿಕೆ ಕೊಡಲ್ಪಟ್ಟಿದೆ. ಇದರಿಂದ ಈ ಕೆಳಗಿನ ಸಿದ್ಧಾಂತವು ಮಾಡಲ್ಪಟ್ಟಿದೆ:

> ಅದನ್ನು ನಿಲ್ಲುವಂತೆ ಬಿಟ್ಟರೆ ಹಾಗೂ ರಕ್ಷಕನನ್ನು ನಡಿಸಿದ ಪ್ರೇರಣೆಯಿಂದ ಒಬ್ಬನು ಮುಳುಗೇಳಿಸಲ್ಪಟ್ಟಿದ್ದರೆ ಆ ವ್ಯಕ್ತಿಯು ನಿವಾರಣೆಯ ಬಗ್ಗೆ ಅಜ್ಞಾನಿಯಾಗಿದ್ದರೂ ಅವನ ಬಾಪ್ತಿಸ್ಮವು ಲೇಖನೆಗಳಿಗೆ ಅನುಗುಣವಾಗಿ ಇರುವುದೆಂದು ತಿಳಿಯಲ್ಪಡಬೇಕು.[3]

ಯೇಸು ಸ್ವೀಕರಿಸಿದ ಬಾಪ್ತಿಸ್ಮವು ಈ ರೀತಿಯಲ್ಲಿ ಒಬ್ಬನಿಗೆ ಬಾಪ್ತಿಸ್ಮದ ಉದ್ದೇಶವು

ತಿಳಿಸಲ್ಪಟ್ಟಿರಲಿಕ್ಕಿಲ್ಲ ಇಲ್ಲವೇ ಅಜ್ಞಾನದಿಂದ ಬಾಪ್ತಿಸ್ಮದ ಉದ್ದೇಶಗಳನ್ನು ಅಲ್ಲಗಳೆದಿರಬಹುದು ಹಾಗೂ ಅವರು ಬಾಪ್ತಿಸ್ಮ ಹೊಂದಿದಾಗ ದೇವರಿಗೆ ವಿಧೇಯರಾಗಲು ಬಾಪ್ತಿಸ್ಮ ಹೊಂದಿದಾಗ ವಾಗ್ದತ್ತ ಲಾಭಗಳನ್ನು ಹೊಂದಿರಬಹುದು ಎಂಬುದನ್ನು ಸಿದ್ಧಪಡಿಸಿ ತೋರಿಸಲು ಉಪಯೋಗಿಸಲ್ಪಟ್ಟಿದೆ.

ಯೇಸುವು ಬಾಪ್ತಿಸ್ಮ ಹೊಂದಿದಾಗ ಆತನಿಗೆ ತನ್ನ ಉದ್ದೇಶದ ತಿಳುವಳಿಕೆಯ ಕೊರತೆಯಿರಲಿಲ್ಲ. ಎಲ್ಲಾ ರೀತಿಯಲ್ಲಿ ಆತನು ನಮಗೆ ಮಾದರಿಯಾಗಿದ್ದಾನೆ. ನಾವು ಬಾಪ್ತಿಸ್ಮ ಹೊಂದಿದಾಗ ತಿಳುವಳಿಕೆಯ ಯಾವುದೇ ಕೊರತೆಯಿರಬಾರದು. ಬಾಪ್ತಿಸ್ಮಕ್ಕಾಗಿ ನಮ್ಮ ಉದ್ದೇಶವು ಯೇಸುವು ಸ್ವೀಕರಿಸಿದ ಬಾಪ್ತಿಸ್ಮದ ಉದ್ದೇಶದಿಂದ ಬೇರೆಯಾಗಿದೆ.

ಮೂರನೆಯ ದೃಷ್ಟಿಕೋನವು ಯೇಸುವು ಬಾಪ್ತಿಸ್ಮ ಹೊಂದಿದಾಗ ಪಾಪರಹಿತನಾಗಿದ್ದುದರಿಂದ, ಬಾಪ್ತಿಸ್ಮ ಹೊಂದಲು ಪ್ರತಿಯೊಬ್ಬರೂ ಪಾಪರಹಿತರಾಗಿರತಕ್ಕದ್ದು. ಇದು ಹಾಗಿದ್ದರೆ, ಬಾಪ್ತಿಸ್ಮವು ರಕ್ಷಣೆಗೆ ಅನಾವಶ್ಯಕವಾದದ್ದಾಗಿದೆ. ಈ ಮನೋಭಾವನೆಯುಳ್ಳವರು ಒಬ್ಬನು ರಕ್ಷಿಸಲ್ಪಡಲು ಬಾಪ್ತಿಸ್ಮ ಮಾಡಿಸಿಕೊಳ್ಳತಕ್ಕದ್ದಾಗಿದ್ದರೆ, ನಂಬಿಕೆಯ ಸಿದ್ಧಾಂತವು ವಿರೋಧಿಸಲ್ಪಡುತ್ತದೆ ಎಂದು ಯೋಚಿಸುತ್ತಾರೆ.

ಯೇಸುವು ಬಾಪ್ತಿಸ್ಮ ಹೊಂದಿದ್ದಕ್ಕೆ ಈ ಮೂರು ವಿಧಾನಗಳು ಬಾಪ್ತಿಸ್ಮಕ್ಕೆ ಯೇಸುವಿನ ಸಮರ್ಪಣೆಯನ್ನು ಬರಿದಾದ ಧಾರ್ಮಿಕ ಆಚರಣೆಯನ್ನಾಗಿ ಮಾಡುತ್ತವೆ. ಪ್ರಥಮ ದೃಷ್ಟಿಕೋನವಿಟ್ಟುಕೊಂಡಿರುವವರು ಯೇಸುವು ಯಾವಾಗಲೂ ದೇವರ ಚಿತ್ತವನ್ನು ಸ್ವೀಕರಿಸಿದ್ದರಿಂದ ಮತ್ತು ಆತನ ಚಿತ್ತವನ್ನು ಮಾಡಲು ಬಂದದ್ದರಿಂದ (ಯೋಹಾನ 6:38; ಇಬ್ರಿಯ 10:7), ಆತನಿಗೆ ಸಾಂಕೇತಿಕವಾಗಿ ದೇವರ ಸೇವೆಗೆ ತನ್ನನ್ನು ತೋರಿಸಿ ಕೊಡುವ ಅಗತ್ಯತೆಯಿರಲಿಲ್ಲ ಎಂಬುದನ್ನು ಒಪ್ಪಿಕೊಳ್ಳತಕ್ಕದ್ದು. ಭೂಲೋಕಕ್ಕೆ ಬರುವದರಿಂದ ಆತನು ಆಗಲೇ ತನ್ನನ್ನು ದೇವರ ಚಿತ್ತಕ್ಕೆ ಒಪ್ಪಿಸಿಕೊಟ್ಟಿದ್ದನು. ಆತನು ಭೂಲೋಕಕ್ಕೆ ಬಂದದ್ದರಿಂದ ದೇವರ ಚಿತ್ತವನ್ನು ಮಾಡುವದಕ್ಕೆ ಆತನಿಗೆ ತನ್ನ ಸಮರ್ಪಣೆಯು ಸಾಕಷ್ಟು ಪುರಾವೆಯಾಗಿತ್ತು. ಯೋಹಾನನಿಂದ ಯೇಸುವಿನ ಬಾಪ್ತಿಸ್ಮವು ಜನರ ನಿಮಿತ್ತ ವಾಗಿಯೂ ಇರಲಿಲ್ಲ. ಯಾಕಂದರೆ ಕೆಲವೇ ಜನರು ಆತನ ಬಾಪ್ತಿಸ್ಮವನ್ನು ನೋಡಿದರು. ಆತನು ಬಾಪ್ತಿಸ್ಮ ಹೊಂದಿದ್ದರಲ್ಲಿ ಒಳಗೊಂಡಿದ್ದು ಇದೇ ಎಲ್ಲವೂ ಆಗಿದ್ದರೆ, ಆಗ ಆತನ ಕಾರ್ಯವು ಬರಿದಾದ ಧರ್ಮಾಚರಣೆಯಾಗಿದೆ.

ಎರಡನೆಯ ದೃಷ್ಟಿ ಕೋನವನ್ನು ಕುರಿತಾಗಿ ಕೇಳುವ ಪ್ರಶ್ನೆ ಇದಾಗಿದೆ: ಯೇಸುವಿನಲ್ಲಿ ಕ್ಷಮಿಸಲ್ಪಡಲು ಯಾವುದೇ ಪಾಪವು ಇರದಿದ್ದರೆ ಮತ್ತು ಆತನು ನಶಿಸು ಹೋಗಿರದಿದ್ದರೆ ಆತನ ಬಾಪ್ತಿಸ್ಮವು ತಪ್ಪಿಹೋದ ಪಾಪಿಯ ಕ್ಷಮಾಪಣೆಗೆ ಹೇಗೆ ಒಂದು ಉದಾಹರಣೆಯಾಗಿರುವುದು? ಆತನ ಬಾಪ್ತಿಸ್ಮವು ವಿಧೇಯತೆಯ ಒಳ್ಳೆಯ ಉದಾಹರಣೆಯಾಗಿದ್ದರೂ ಪಾಪಿಯು ಕ್ಷಮಿಸಲ್ಪಟ್ಟದ್ದರ ಉದಾಹರಣೆಯನ್ನು ಬೇರೆಕಡೆಯಲ್ಲಿ ನೋಡತಕ್ಕದ್ದು (ಅಪೊಸ್ತಲರ ಕೃತ್ಯ 2:38-41; 22:16). ಹೀಗಿದ್ದರೂ ಕ್ಷಮಾಪಣೆಯು ಕೇವಲ ಬಾಪ್ತಿಸ್ಮಕ್ಕಿಂತ ಹೆಚ್ಚಿನದನ್ನು ಒಳಗೊಂಡಿರುತ್ತದೆ.

ಯೇಸುವಿನ ಬಾಪ್ತಿಸ್ಮವು ಆತನು ವಿಧೇಯತೆಯ ಪರಿಪೂರ್ಣ ದಾಖಲೆಯನ್ನಿಡಲಾಗುವಂತೆ ದೇವರ ಪ್ರತಿಯೊಂದು ನೀತಿಯ ಅಗತ್ಯತೆಯನ್ನು ಪೂರೈಸಲು ಒಂದು ಪ್ರಯತ್ನವಾಗಿತ್ತು. ಪಾಪಿಗಾಗಿ ಬಾಪ್ತಿಸ್ಮವು ಇನ್ನೊಂದೆಡೆಯಲ್ಲಿ ಕ್ಷಮಿಸಲ್ಪಡುವದಕ್ಕಾಗಿಯೂ ಅಪರಿಪೂರ್ಣ ದಾಖಲೆಯನ್ನು ಸರಿಪಡಿಸುವದಕ್ಕಾಗಿಯೂ ದೇವರೊಂದಿಗೆ ಸರಿಯಾದ ಸಂಬಂಧದಲ್ಲಿ ಪ್ರವೇಶಿಸುವದಕ್ಕಾಗಿಯೂ ಇತ್ತು.

ಯೇಸು ಹಾಗೂ ಯೋಹಾನನ ಬಾಪ್ತಿಸ್ಮಕ್ಕಾಗಿ ಬಂದ ಇತರರು ದೇವರಿಗೆ ವಿಧೇಯರಾಗಲು ಬಂದರು. ಆದರೆ ಅವರಲ್ಲಿ ಎರಡು ಸಂಪೂರ್ಣ ಭಿನ್ನವಾದ ಉದ್ದೇಶಗಳಿದ್ದವು.

ನನ್ನ ಸಹೋದರ ಗ್ಲೆನ್ ನಮ್ಮ ತಂದೆ ತಾಯಿಗಳಿಗೆ ವಿಧೇಯನಾಗಿ ಅಡವಿಯೊಳಗೆ ಒಯ್ಯಲ್ಪಟ್ಟನು. ಅದರಿಂದ ಅವನು ನಮ್ಮ ಚಿಕ್ಕಪ್ಪನ ಮಗನ ವಾಹನದಲ್ಲಿ ಹೋಗಲು ಬಿಟ್ಟರು. ನಾನು ನನ್ನ ಒಬ್ಬ ಸ್ನೇಹಿತನೊಂದಿಗೆ ಬಾಣಗಳನ್ನು ಹುಡುಕಲು ಅಡವಿಯೊಳಗೆ ಹೋಗಲು ಬಿಡಲ್ಪಟ್ಟನು. ಇವೆರಡೂ ವಿಧೇಯತೆಯ ಕಾರ್ಯಗಳಾಗಿದ್ದವು. ಆದರೆ ಎರಡು ಭಿನ್ನವಾದ ಉದ್ದೇಶಗಳಿದ್ದವು. ನನ್ನ ತಂದೆ ತಾಯಿಗಳಿಗೆ ವಿಧೇಯರಾಗಿರುವದರ ಬಗ್ಗೆ ನನಗೆ ಉದಾಹರಣೆಯಾಗಿ ಗ್ಲೆನ್ ಅವರೊಂದಿಗ ಒಯ್ಯಲ್ಪಟ್ಟಿರಬಹುದು. ಹೀಗಿದ್ದರೂ ನಮ್ಮ ಉದ್ದೇಶಗಳು ಇನ್ನೂ ಸಂಪೂರ್ಣವಾಗಿ ಒಂದೇ ರೀತಿಯಲ್ಲಿ ಇರುವದಿಲ್ಲ. ಅದೇ ರೀತಿಯಲ್ಲಿ, ಯೇಸು ವಿಧೇಯತೆಯ ಉದಾಹರಣೆಯಾಗಿ ಬಾಪ್ತಿಸ್ಮ ಹೊಂದಿದನು. ಆದಾಗ್ಯೂ ಎಲ್ಲಾ ಅದೇ ಉದ್ದೇಶಗಳಿಗಾಗಿ ಪಾಪಿಯು ವಿಧೇಯನಾಗಲಿಲ್ಲ.

ಮೂರನೆಯ ದೃಷ್ಟಿಕೋನವು ಸಹ ಹೊಸ ಒಡಂಬಡಿಕೆಯ ಬಾಪ್ತಿಸ್ಮವನ್ನು ಕೇವಲ ಬರಿದಾದ ಧರ್ಮಾಚರಣೆಯನ್ನಾಗಿ ಮಾಡುತ್ತದೆ. ಮಾನವ ರಕ್ಷಣೆಗಾಗಿ ಬಾಪ್ತಿಸ್ಮವು ದೇವರ ಅಗತ್ಯತೆಯಾಗಿರದಿದ್ದರೆ ಹಾಗೂ ಅದಕ್ಕೆ ನಿಜವಾದ ಆತ್ಮಿಕ ಬೆಲೆಯಿಲ್ಲದಿದ್ದರೆ, ಆಗ ಅದು ಅರ್ಥವಿಲ್ಲದ ಆಚರಣೆಯಾಗುತ್ತದೆ. ನಿಶ್ಚಯವಾಗಿ ನೀರಿನಲ್ಲಿ ಆಚರಿಸಲ್ಪಟ್ಟ ಬರಿದಾದ ಧಾರ್ಮಿಕ ಆಚರಣೆಯು ಬಾಹ್ಯಕಾರ್ಯಕ್ಕಿಂತ ಬಾಪ್ತಿಸ್ಮದಲ್ಲಿಯ ವಿಧೇಯತೆ ಹೆಚ್ಚು ಅರ್ಥವನ್ನು ಉದ್ದೇಶಿಸಲಾಗಿತ್ತು.

## ಯೋಹಾನನ ಸೇವೆಯಲ್ಲಿ ಯೇಸುವಿನ ಬಾಪ್ತಿಸ್ಮವು ತಿಳಿಯಲ್ಪಟ್ಟದ್ದು

ಯೇಸುವು ಹೊಂದಿದ ಬಾಪ್ತಿಸ್ಮವು ಯೋಹಾನನ ಸೇವೆಯ ಹಿನ್ನೆಲೆಯಲ್ಲಿ ಅರ್ಥಮಾಡಿ ಕೊಳ್ಳಬೇಕು. ಈ ಹಿನ್ನೆಲೆಯ ಹೊರಗೆ ಬೇರೆ ಕಡೆಯಲ್ಲಿ ಅರ್ಥವನ್ನು ಹುಡುಕಿದರೆ, ಅವರ ಪ್ರಯತ್ನಗಳು ನಿರಾಶವಾದವುಗಳೂ ತಪ್ಪಾಗಿ ನಡಿಸಲ್ಪಟ್ಟವುಗಳೂ ಕೆಡಿಸಲ್ಪಟ್ಟವುಗಳೂ ಆಗುವವು.

"ಯೋಹಾನನು ಬಾಪ್ತಿಸ್ಮವನ್ನು ಬೋಧಿಸಿದನು" ಎಂಬ ಪಾಠದಲ್ಲಿ ಹೇಳಿದಂತೆ (ನೋಡಿರಿ. ಮತ್ತಾಯ 3:1-3; ಲೂಕ 3:1-9; ಯೋಹಾನ 1:15-34), ಯೋಹಾನನ ಸೇವೆಯ ಉದ್ದೇಶವು ಜನರನ್ನು ಮೆಸ್ಸೀಯನ ಬರೋಣಕ್ಕಾಗಿ ಸಿದ್ಧಪಡಿಸುವುದು ಆಗಿತ್ತು (ಯೋಹಾನ 1:6-8). ಈ ಸಿದ್ಧತೆಯು ಇವುಗಳನ್ನು ಒಳಗೊಂಡಿತ್ತು: (1) ಬೇಗನೇ ಸ್ಥಾಪಿಸಲ್ಪಡಲಿಕ್ಕಿದ್ದ ರಾಜ್ಯದ ಬಗ್ಗೆ ಹೇಳುವುದು, (2) ಅರಸನನ್ನು, ಮೆಸ್ಸೀಯನನ್ನು ಸ್ವೀಕರಿಸಲು ಜನರನ್ನು ಸಿದ್ಧಪಡಿಸುವುದು, (3) ಮಾನಸಾಂತರಪಡಲು ಜನರನ್ನು ಪ್ರೇರೇಪಿಸುವುದು, (4) ಅವರು ಮಾನಸಾಂತರ ಪಡುತ್ತಿರುವರೆಂಬದಕ್ಕೆ ಮತ್ತು ಬೇಗನೇ ಪ್ರಕಟವಾಗಲಿರುವ ಮೆಸ್ಸೀಯನಲ್ಲಿ ನಂಬಲು ಸಿದ್ಧರಾಗಿರುವರೆಂಬುದಕ್ಕೆ ಪುರಾವೆಯಂತೆ ಬಾಪ್ತಿಸ್ಮದಲ್ಲಿ ಜನರನ್ನು ಒಪ್ಪಿಸಿಕೊಡುವದಕ್ಕೆ ತರುವುದು.

## ಯೇಸುವಿನ ಬಾಪ್ತಿಸ್ಮದ ಹೇತು ಮತ್ತು ಉದ್ದೇಶ

ಹೇತು ಮತ್ತು ಉದ್ದೇಶ ಭಿನ್ನವಾಗಿರಬಹುದು. ತನ್ನ ಮಗನು ಸ್ನಾನ ಮಾಡಿ ತನ್ನ ತಲೆಗೂದಲನ್ನು ಬಾಚಿಕೊಳ್ಳಬೇಕೆಂದು ಬಯಸಬಹುದು. ಉದ್ದೇಶವು ತನ್ನ ಮಗನು ಚೆನ್ನಾಗಿ ಕಾಣಬೇಕೆಂದಿರಬಹುದು. ಆದರೆ ಕಾರಣವು ತನ್ನ ಮಗನನ್ನು

ಮದುವೆ ಯಾಗಲಿರುವ ಯುವತಿಗೆ ಅವನು ಆಕರ್ಷಕವಾಗಿ ಕಾಣುವಂತೆ ಮಾಡುವುದಾಗಿರುವುದು. ಈ ವಿಷಯದಲ್ಲಿ ಪ್ರೇರಣೆ ಮತ್ತು ಹೇತು ಭಿನ್ನವಾಗಿರುತ್ತದೆ.

ಸ್ಪಷ್ಟವಾಗಿ ಹೇಳಲ್ಪಡದಿದ್ದರೂ ದೇವರಿಗೆ ವಿಧೇಯನಾಗುವ ಯೇಸುವಿನ ಅಪೇಕ್ಷೆಯು ಬಾಪ್ತಿಸ್ಮ ಹೊಂದಲು ಆತನನ್ನು ಪ್ರೇರಿಸಿತೆಂದು ಹೇಳಬಹುದು. ಯೋಹಾನನ ಬಾಪ್ತಿಸ್ಮಕ್ಕಾಗಿ ಬಂದ ಇತರ ಎಲ್ಲರಿಗೂ ಅದೇ ಕಾರಣ ಇರಬಹುದು. ಅದು ದೇವರಿಗೆ ವಿಧೇಯರಾಗುವುದು. ಆದರೆ ಅವರ ಉದ್ದೇಶವು ಯೇಸುವಿನ ಉದ್ದೇಶಗಳಂತೆ ಇದ್ದಿರಲಿಕ್ಕಿಲ್ಲ. ಆತನು ಎಲ್ಲಾ ನೀತಿಯನ್ನು ನೆರವೇರಿಸಲು ಬಂದನು. ಆದರೆ ಅವರು ತಮ್ಮ ಪಾಪಗಳ ಕ್ಷಮಾಪಣೆಯ ಮುಖಾಂತರ ನೀತಿವಂತರಾಗಲು ಬಂದರು. ಯೇಸುವು ಮತ್ತು ಯೋಹಾನನ ಅನುಯಾಯಿಗಳು ಒಂದೇ ಉದ್ದೇಶಕ್ಕಾಗಿ ಬಂದಿದ್ದರೆ, ಆಗ ಈ ರೀತಿಯಲ್ಲಿ ನಿರ್ಣಯಿಸ ಬೇಕಾಗುತ್ತದೆ: (1) ಯೇಸುವು ಪಾಪಿಯಾಗಿದ್ದನು, ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಡುತ್ತ ತನ್ನ ಪಾಪಗಳನ್ನು ಅರಿಕೆ ಮಾಡುತ್ತ, ಮತ್ತು ತನ್ನ ಪಾಪಗಳ ಕ್ಷಮಾಪಣೆಯ ಮೂಲಕ ನೀತಿವಂತನಾಗುವಂಥೆ ವಿಧೇಯನಾಗುತ್ತ ಬಾಪ್ತಿಸ್ಮಕ್ಕೆ ಬಂದನು. ಇಲ್ಲವೇ (2) ಒಬ್ಬನು ಪಾಪದ ಯಾವುದೇ ಅಪರಾಧವಿಲ್ಲದೆ ಬಾಪ್ತಿಸ್ಮಕ್ಕೆ ಬರತಕ್ಕದ್ದು, ಯಾಕಂದರೆ ಯೇಸುವು ಬಾಪ್ತಿಸ್ಮ ಹೊಂದಿದಾಗ ಪಾಪರಹಿತನಾಗಿದ್ದನು. ಮೊದಲನೆಯ ತೀರ್ಮಾನವು ಯೇಸುವನ್ನು ಪಾಪಿಯನ್ನಾಗಿ ಮಾಡುವುದು ಲೇಖನಕ್ಕೆ ವಿರುದ್ಧವಾದದ್ದಾಗಿರುತ್ತದೆ (ಇಬ್ರಿಯ 4:15). ಎರಡನೆಯದು ಬಾಪ್ತಿಸ್ಮವು ಪಾಪಿಗಳ ಕ್ಷಮಾಪಣೆಗಾಗಿ ಇರುವುದೆಂದು ಬೈಬಲ್ ಬೋಧನೆಗೆ ವಿರುದ್ಧವಾದದ್ದಾಗಿದೆ (ಅಪೊಸ್ತಲರ ಕೃತ್ಯ 2:38; 22:16).

ನೀತಿಯುತ ಅಗತ್ಯತೆಯನ್ನು ಪೂರೈಸಲು ಯೇಸುವು ಬಾಪ್ತಿಸ್ಮ ಹೊಂದ ಬೇಕೆಂದು ಹೇಳಿದ್ದರೆ, ಆಗ ಆತನು ಅದೇ ಕಾರಣಕ್ಕಾಗಿ ಬಾಪ್ತಿಸ್ಮ ಹೊಂದ ಬೇಕಾಗಿತ್ತೆಂದು ತೀರ್ಮಾನಿಸಬಹುದು. ಆದರೆ ಯೇಸು ಎಲ್ಲಾ ನೀತಿಯನ್ನು ಪೂರೈಸುವದಕ್ಕಾಗಿ ತಾನು ಬಾಪ್ತಿಸ್ಮ ಹೊಂದುವದರಿಂದ ಉಳಿದ ಪ್ರತಿಯೊಬ್ಬರನ್ನು ಹೊರಗಿಡುತ್ತದೆ. ಯಾಕಂದರೆ ಯಾರಾದರೂ ಹಾಗೆಯೇ ತಾನು ಯೇಸುವಿನಿಂದ ಬಾಪ್ತಿಸ್ಮ ಹೊಂದಿಕೊಳ್ಳಬೇಕೆಂದು ಒಪ್ಪಿಕೊಂಡ ಯೋಹಾನನಿಗೂ (ಮತ್ತಾಯ 3:14) ಎಲ್ಲಾ ನೀತಿಯನ್ನು ನೆರವೇರಿಸುವ ಸಮೀಪಕ್ಕೆ ಬರಲಾಗಲಿಲ್ಲ (ರೋಮಾಪುರ 3:10). ಯೇಸು ಇದಕ್ಕೆ ಭಿನ್ನವಾಗಿದ್ದನು ಮತ್ತು ಎಲ್ಲಾ ನೀತಿಯನ್ನು ನೆರವೇರಿಸುವದಕ್ಕಾಗಿ ಬಾಪ್ತಿಸ್ಮ ಹೊಂದಬಹುದಾಗಿದ್ದನು.

ಬಾಪ್ತಿಸ್ಮವನ್ನು ತಿರಸ್ಕರಿಸುವವರು, ಬಾಪ್ತಿಸ್ಮ ಹೊಂದುವದರಿಂದ ಯೇಸುವು ಕೊಟ್ಟ ಸಾಕ್ಷಿಯನ್ನು ತಿರಸ್ಕರಿಸುವರು, ಮತ್ತು ದೇವರ ನೀತಿಯ ಬೇಡಿಕೆಯನ್ನು ತಿರಸ್ಕರಿಸುವರು. ಬಾಪ್ತಿಸ್ಮವು ಒಳ್ಳೇ ಕಾರ್ಯ ಮಾಡುವಂತೆ ಇಲ್ಲವೇ ಬಡವರಿಗೆ ಸಹಾಯ ಮಾಡುವಂಥ ಮಾನವ ನೀತಿಯ ಕೃತ್ಯವಾಗಿರುವದಿಲ್ಲ (ತೀತ 3:5). ಅದು ಪರಲೋಕದಿಂದ, ದೇವರಿಂದ ಬಂದದ್ದು; ಆದುದರಿಂದ ಒಬ್ಬನು ಅದಕ್ಕೆ ಒಪ್ಪಿಸಿಕೊಳ್ಳುವಾಗ, ದೇವರ ನೀತಿಯ ಬೇಡಿಕೆಯನ್ನು ಪೂರೈಸುತ್ತದೆ. ಈ ಒಂದು ಕಾರಣದಿಂದ ಯೇಸು ಬಾಪ್ತಿಸ್ಮ ಹೊಂದಿಕೊಳ್ಳುವ ಅಗತ್ಯತೆಯಿತ್ತು. ಯಾಕಂದರೆ ಬಾಪ್ತಿಸ್ಮವು ದೇವರ ಎಲ್ಲಾ ನೀತಿಯುಳ್ಳ ಬೇಡಿಕೆಗಳಲ್ಲಿತ್ತು.

## ಯೋಹಾನನ ಬಾಪ್ತಿಸ್ಮವು ಪರಲೋಕದಿಂದ ಬಂದದ್ದು

ಯೋಹಾನನಿಂದ ಯೇಸುವು ಬಾಪ್ತಿಸ್ಮ ಹೊಂದಿದಾಗ, ಯೋಹಾನನ ಬಾಪ್ತಿಸ್ಮವು

ಪರಲೋಕದಿಂದ ಬಂದದ್ದೆಂದು, ಬಾಪ್ತಿಸ್ಮವನ್ನು ಕೊಡಲು ದೇವರು ಯೋಹಾನನನ್ನು ಕಳುಹಿಸಿದನೆಂದು ಯೇಸು ಅರ್ಥಮಾಡಿಕೊಂಡಿದ್ದನು (ಲೂಕ 20:1-8). ಯೇಸುವು ಮಾಡಿದ ಕಾರ್ಯಗಳನ್ನು ಆತನು ಯಾವ ಅಧಿಕಾರದಿಂದ ಮಾಡುತ್ತಿದ್ದಾನೆಂದು ಮಹಾ ಯಾಜಕರೂ ಹಿರಿಯರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಯೇಸು "ಯೋಹಾನನ ಬಾಪ್ತಿಸ್ಮವು ಪರಲೋಕದಿಂದ ಬಂದದ್ದೋ ಇಲ್ಲವೆ ಮನುಷ್ಯರಿಂದ ಬಂತೋ?" ಎಂದು ಪ್ರಶ್ನಿಸಿದನು (ಲೂಕ 20:4).

ಪ್ರಶ್ನೆಯ ಅನ್ವಯವು ಸ್ಪಷ್ಟವಾಗಿತ್ತು. ಯೋಹಾನನ ಬಾಪ್ತಿಸ್ಮವು ಪರಲೋಕದಿಂದ ಬಂದದ್ದೆಂದು ಅವರು ಹೇಳಿದರೆ ಅವರು ಯೋಹಾನನ ಬಾಪ್ತಿಸ್ಮವನ್ನು ಸ್ವೀಕರಿಸ ಬೇಕಾಗಿತ್ತು ಮತ್ತು ಯೇಸುವು ಮೆಸ್ಸೀಯನಾಗಿದ್ದಾನೆಂದು ಅವನ ಸಾಕ್ಷಿಯನ್ನು ಒಪ್ಪಿಕೊಳ್ಳ ಬೇಕಾಗಿತ್ತು. ಯೋಹಾನನ ಬಾಪ್ತಿಸ್ಮಕ್ಕೆ ಅವರು ಒಪ್ಪಿಸಿಕೊಳ್ಳದೆ ಹೋದದ್ದು ಅದು ಮನುಷ್ಯರಿಂದ ಬಂದದ್ದೆಂದು ಅವರು ಯೋಚಿಸಿದರೆಂಬುದನ್ನು ತೋರಿಸುತ್ತದೆ: ಆದುದರಿಂದ ಯೇಸುವನ್ನು ಕುರಿತಾದ ಅವನ ಸಾಕ್ಷಿಯನ್ನು ಅವರು ಸ್ವೀಕರಿಸಲಿಲ್ಲ.

ಯೋಹಾನನಿಂದ ಬಾಪ್ತಿಸ್ಮವನ್ನು ತಾವೇ ಹೊಂದದೇ ಇರುವದರಿಂದ ಈ ನಾಯಕರು ದೇವರ ಉಪದೇಶವನ್ನು (ನಿಯೋಜಿತ ಉದ್ದೇಶವನ್ನು) ತಿರಸ್ಕರಿಸಿದರು. ಬಾಪ್ತಿಸ್ಮವನ್ನು ಸ್ವೀಕರಿಸಿದವರು "ದೇವರನ್ನು ನೀತಿವಂತರನ್ನಾಗಿ ಮಾಡಿದರು" ಅಂದರೆ ಬಾಪ್ತಿಸ್ಮ ಹೊಂದುವದರಿಂದ ದೇವರ ಮಾರ್ಗವು ಸರಿಯಾಗಿದೆಯೆಂದು ಒಪ್ಪಿಕೊಂಡರು (ಲೂಕ 7:30).

ಈ ಹಿನ್ನೆಲೆಯಲ್ಲಿ, ಯೇಸುವು ಯೋಹಾನನಿಂದ ಬಾಪ್ತಿಸ್ಮ ಹೊಂದಲು ಬಂದನು. ಶಕ್ತನ ಬಗ್ಗೆ ಯೋಹಾನನ ಸಂದೇಶವು (ಮಾರ್ಕ 1:7) ತನ್ನನ್ನು ಕುರಿತಾಗಿತ್ತೆಂದು ಯೇಸು ತಿಳಿದಿದ್ದನು. ಬಾಪ್ತಿಸ್ಮ ಹೊಂದುವದರಿಂದ ಯೇಸುವು ಯೋಹಾನನ ಕಾರ್ಯಕ್ಕೆ ಮನ್ನಣೆ ಕೊಟ್ಟದ್ದಲ್ಲದೇ ಅವನ ಸಂದೇಶದ ಕ್ರಮಬದ್ಧತೆಗೂ ಸಾಕ್ಷಿಕೊಟ್ಟನು. ಯೇಸುವು ಯೋಹಾನನಿಂದ ಬಾಪ್ತಿಸ್ಮ ಹೊಂದುವದನ್ನು ನಿರಾಕರಿಸಿದ್ದರೆ ಯೋಹಾನನು ಮೋಸಗಾರನೂ ವಂಚಕನೂ ಆಗಿದ್ದ ನೆಂಬುದನ್ನು ಸೂಚಿಸುತ್ತಿದ್ದನು. ತನ್ನ ಬಾಪ್ತಿಸ್ಮದಿಂದ ಯೇಸುವು ಅವನು ಏನಾಗಿರುವನೆಂದು ಹೇಳಿಕೊಂಡಿದ್ದನೋ ಅದಾಗಿರುವನು ಎಂದೂ (ಮತ್ತಾಯ 3:3; ಯೋಹಾನ 1:23) ಮತ್ತು ಯೇಸುವು ಮೆಸ್ಸೀಯನಾಗಿರುವನೆಂದೂ ತನ್ನನ್ನು ಕುರಿತು ಯೋಹಾನನ ಸಂದೇಶವು ಸತ್ಯವಾಗಿರುವದೆಂದೂ ಸಾಕ್ಷಿಕೊಟ್ಟನು (ಯೋಹಾನ 1:15).

ಯೋಹಾನನು ತನ್ನ ಬಾಪ್ತಿಸ್ಮವು ಪರಲೋಕದಿಂದ ಬಂದದ್ದೆಂದು ಅರಿತುಕೊಂಡಿದ್ದನು. ಯಾಕಂದರೆ ಬಾಪ್ತಿಸ್ಮ ಕೊಡಲು ದೇವರು ತನ್ನನ್ನು ಕಳುಹಿಸಿದ್ದಾನೆ ಹಾಗೂ ಬಾಪ್ತಿಸ್ಮ ನೀಡುವುದರ ಮುಖಾಂತರ ಮೆಸ್ಸೀಯನು ತನಗೆ ಪ್ರಕಟಿಸಲ್ಪಡುವನೆಂದೂ ಹೇಳಿದನು (ಯೋಹಾನ 1:33, 34). ಯೋಹಾನನು ದೇವರ ನಿಜವಾದ ಪ್ರವಾದಿಯೆಂದು ಹೇಳಲಿಕ್ಕೆ ಮಾತ್ರವೇ ಯೇಸುವು ಬಾಪ್ತಿಸ್ಮ ಹೊಂದಲಿಕ್ಕೆ ಬರಲಿಲ್ಲ, ಆದರೆ ತನ್ನ ಬಾಪ್ತಿಸ್ಮದಲ್ಲಿ ತಾನು ಯೋಹಾನನಿಗೆ ಪ್ರಕಟಿಸಲ್ಪಡಲು, ಆಮೇಲೆ ಅವನು ಯೇಸುವು ದೇವರ ಕುಮಾರನಾಗಿರುವುದು ಇಸ್ರಾಯೇಲ್ಯರಿಗೆ ಸಾಕ್ಷಿಕೊಡುವಂತೆಯೂ ಬಂದನು (ಯೋಹಾನ 1:31-33). ಈ ಕಾರಣದಿಂದ ಯೇಸು ಬಾಪ್ತಿಸ್ಮ ಹೊಂದಿದ್ದಕ್ಕೆ ಬಹಳ ಮುಖ್ಯತ್ವ ಕೊಡತಕ್ಕದ್ದು.

ಇಸ್ರಾಯೇಲ್ಯರಿಗೆ ಪ್ರಕಟವಾಗಲು ಯೇಸುವು ಬಾಪ್ತಿಸ್ಮ ಹೊಂದಿದನು (ಯೋಹಾನ 1:31). ಆದರೆ ಇಸ್ರಾಯೇಲಿನ ಕೆಲವೇ ಜನರು ಯೇಸುವು ಬಾಪ್ತಿಸ್ಮ ಹೊಂದಿದ್ದನ್ನು ನೋಡಿದರು. ಆತನ ಬಾಪ್ತಿಸ್ಮವನ್ನು ನೋಡಿದ ಪ್ರಥಮನು ಯೋಹಾನನು. ಇದು ಬಹಳ ಮುಖ್ಯವಾದದ್ದಾಗಿತ್ತು, ಯಾಕಂದರೆ ಬಾಪ್ತಿಸ್ಮದ ನಂತರ ಯೇಸುವಿನ

ಮೇಲೆ ಪವಿತ್ರಾತ್ಮನು ಬಂದಾಗ ಯೇಸುವು ಮೆಸ್ಸೀಯನೆಂದು ದೇವರ ಸಾಕ್ಷಿಯನ್ನು ಯೋಹಾನನು ನೋಡಿದನು. ಯೇಸುವಿನ ಬಾಪ್ತಿಸ್ಮದಲ್ಲಿ ತಕ್ಷಣದ ಕಾರ್ಯವು ಯೇಸುವಿಗೆ ಪರಿಶುದ್ಧಾತ್ಮನನ್ನು ಕಳುಹಿಸುವದರಿಂದ ಯೋಹಾನನಿಗೆ ಕೊಟ್ಟ ದೇವರ ಸಾಕ್ಷಿಯಾಗಿತ್ತು. ಅಂತಿಮ ಪರಿಣಾಮವು ಯೇಸುವು ದೇವರ ಕುಮಾರನಾಗಿದ್ದಾನೆಂದು ಇಸ್ರಾಯೇಲ್ಯರಿಗೆ ಯೋಹಾನನ ಸಾಕ್ಷಿಯಾಗಿತ್ತು (ಯೋಹಾನ 1:32-34).

## ನೀರಿನ ಬಾಪ್ತಿಸ್ಮದ ಮುಖ್ಯತ್ವ

ನಿಶ್ಚಯವಾಗಿಯೂ ದೇವರು ನೀರಿನ ಬಾಪ್ತಿಸ್ಮಕ್ಕೆ ಮುಖ್ಯತ್ವವನ್ನು ಕೊಡಲು ಬಯಸಿದನು. ಯೇಸುವು ಮೆಸ್ಸೀಯನಾಗಿದ್ದಾನೆ, ದೇವರ ಕುಮಾರನಾಗಿದ್ದಾನೆ ಎಂಬುದಕ್ಕೆ ಸಾಕ್ಷಿಯಾಗಿ ಯೋಹಾನನು ಯೇಸುವಿಗೆ ಬಾಪ್ತಿಸ್ಮ ಕೊಟ್ಟನು (ಯೋಹಾನ 1:31-34), ಮತ್ತು "ಈತನು ನನ್ನ ಪ್ರಿಯ ಕುಮಾರನು, ಈತನಲ್ಲಿ ನಾನು ಆನಂದಿಸುತ್ತಿದ್ದೇನೆ" (ಮತ್ತಾಯ 3:17) ಎಂಬ ಹೇಳಿಕೆಯನ್ನು ಕೊಟ್ಟನು. ಯೇಸುವೂ ಸಹ ನೀರಿನ ಬಾಪ್ತಿಸ್ಮದ ಪ್ರಾಮುಖ್ಯತೆಯನ್ನು ಒತ್ತಿ ಹೇಳಲು ಬಯಸಿರಬಹುದು. ಆತನು ಪಾಪರಹಿತನಾಗಿದ್ದರೂ (ಇಬ್ರಿಯ 4:15), ಯೋಹಾನನ ಬಾಪ್ತಿಸ್ಮದೊಂದಿಗೆ ಸಂಬಂಧಿಸಿದ ಪಾಪಗಳ ಕ್ಷಮಾಪಣೆಯ ಆಗತ್ಯತೆಯಿಲ್ಲದಿದ್ದರೂ ಆತನು ಬಾಪ್ತಿಸ್ಮ ಹೊಂದಿದನು.

## ಯೇಸು, ಹೊರತಾದವನು

ಯೇಸು ಅಪವಾದವಾಗಿದ್ದನು. ಯೋಹಾನನ ಬಾಪ್ತಿಸ್ಮಕ್ಕೆ ಬಂದ ಪ್ರತಿಯೊಬ್ಬನಿಗೂ ಕ್ಷಮಾಪಣೆಯ ಅವಶ್ಯಕತೆಯಿತ್ತು. ಅರಿಕೆ ಮಾಡಲು ಅವರಿಗೆ ಪಾಪಗಳಿದ್ದವು ಹಾಗೂ ಬಾಪ್ತಿಸ್ಮ ಹೊಂದುವ ಮೊದಲು ಅವರು ಅವುಗಳನ್ನು ಅರಿಕೆ ಮಾಡಬೇಕಾಗಿತ್ತು (ಮತ್ತಾಯ 3:7, 8). ಅವರು ತಮ್ಮ ಜೀವನದಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಳ್ಳಲು ಹೇಳಲ್ಪಟ್ಟಿದ್ದರು (ಲೂಕ 3:10-14) ಮತ್ತು ಬರಲಿಕ್ಕಿದ್ದ ಮೆಸ್ಸೀಯನಲ್ಲಿ ನಂಬಿಕೆಯಿಡ ಬೇಕಾಗಿತ್ತು (ಅಪೊಸ್ತಲರ ಕೃತ್ಯ 19:4). ಯೋಹಾನನ ಬಾಪ್ತಿಸ್ಮದಲ್ಲಿ ಸಂಬಂಧಿಸಿರುವ ಈ ಉದ್ದೇಶಗಳಲ್ಲಿ ಯಾವುದೂ ಯೇಸುವಿಗೆ ಅನ್ವಯವಾಗಲಿಲ್ಲ. ಆದರೆ ಯೋಹಾನನ ಬಾಪ್ತಿಸ್ಮದೊಂದಿಗೆ ಸಂಬಂಧಿಸಿದ ಇತರ ವಿಚಾರಗಳು ಆತನಿಗೆ ಅನ್ವಯಿಸಿರಬಹುದು (ಬರಲಿಕ್ಕಿದ್ದ ರಾಜ್ಯ ಮತ್ತು ಬರಲಿಕ್ಕಿದ್ದ ಮೆಸ್ಸೀಯ). ಯೋಹಾನನ ಬಾಪ್ತಿಸ್ಮದ ಎಲ್ಲಾ ಅನ್ವಯಗಳು ಯೇಸುವಿಗೆ ಅನ್ವಯಿಸಲ್ಪಡದಿದ್ದರೂ ಕೆಲವು ಅನ್ವಯಿಸಲ್ಪಟ್ಟವು. ಆದುದರಿಂದ ಯೇಸು ಯೋಹಾನನ ಬಾಪ್ತಿಸ್ಮಕ್ಕೆ ಒಪ್ಪಿಸಿಕೊಟ್ಟನು.

ಯೇಸುವಿನ ಬಾಪ್ತಿಸ್ಮವನ್ನು, ಪ್ರತೀ ಮಂಗಳವಾರ ಪಟ್ಟಣದಲ್ಲಿಯ ಪ್ರತಿಯೊಂದು ಕಾರು ತೊಳೆಯಲ್ಪಡಬೇಕು ಎಂದು ತನ್ನ ತಂದೆಯು ಕಾನೂನನ್ನು ಜಾರಿಗೆ ತಂದ ಮೇಯರನ ಮಗನ ಕಾರ್ಯಕ್ಕೆ ಹೋಲಿಸಬಹುದು, ಸೋಮವಾರ ಸಾಯಂಕಾಲ ಮಗನು ಕಲೆಯಾಗಲೀ, ಧೂಳಿನ ಕಣಗಳಾಗಲೀ ಇಲ್ಲದ ಹೊಸ ಕಾರನ್ನು ಕೊಂಡು ಕೊಂಡನು. ಮೇಯರನಾಗಿದ್ದ ತನ್ನ ತಂದೆಯ ಕಾನೂನಿಗೆ ಗೌರವ ತೋರಿಸಲು, ಮಗನು ಮಂಗಳವಾರ ದಿನ ತನ್ನ ಕಾರನ್ನು ತೊಳೆಯುವ ಅವಶ್ಯಕತೆಯಿಲ್ಲದಿದ್ದರೂ ಅದನ್ನು ತೊಳೆದನು. ಹೀಗೆ ಮಾಡುವದರಿಂದ ಮಗನು ತನ್ನ ತಂದೆಗೆ ಗೌರವ ತೋರಿಸಿದ್ದು ಅಲ್ಲದೇ ತನ್ನ ತಂದೆಯ ಅಧಿಕಾರದ ಮೇಲೆ ಮತ್ತು ತನ್ನ ತಂದೆಯಿಂದ ಜಾರಿಗೆ ಬಂದ ಕಾನೂನಿನ ಮೇಲೆ ಇಟ್ಟ ಪ್ರಾಮುಖ್ಯತೆಯನ್ನು ತೋರಿಸಿದನು. ಅವನು ತನ್ನ ಕಾರನ್ನು ತೊಳೆದರೂ ಇತರ ಎಲ್ಲರ ಹಾಗೆ ಅವರ ಪ್ರತಿಕ್ರಿಯೆಯಿದ್ದರೂ ಅವನ ಉದ್ದೇಶವು ಭಿನ್ನ

ವಾಗಿತ್ತು. ಅವನು ತನ್ನ ತಂದೆಯ ಗೌರವಕ್ಕಾಗಿ ಹಾಗೆ ಮಾಡಿದನು. ಅವರು ಅವನ ತಂದೆಯನ್ನು ಗೌರವಿಸಿದರಲ್ಲದೇ ತಮ್ಮ ಕಾರುಗಳನ್ನು ಸ್ವಚ್ಛ ಮಾಡಿಕೊಂಡರು. ಅದೇ ರೀತಿಯಲ್ಲಿ ದೇವರ ಶುದ್ಧನಾದ ಕುಮಾರನು ಯೋಹಾನನ ಸೇವೆಗೆ ಮತ್ತು ಯೋಹಾನನ ಮುಖಾಂತರ ತನ್ನ ತೆಂದೆಯು ಆಜ್ಞಾಪಿಸಿದ ಬಾಪ್ತಿಸ್ಮಕ್ಕೆ ತನ್ನ ತಂದೆಗೆ ಗೌರವ ಕೊಡಲು ಆತನು ಬಾಪ್ತಿಸ್ಮ ಹೊಂದಿದನು.

ಯೇಸುವಿನಲ್ಲಿ ಪಾಪಗಳಿರಲಿಲ್ಲ; ಹೀಗೆ ಪಾಪಗಳ ಕ್ಷಮಾಪಣೆಗಾಗಿ ಮಾನಸಾಂತರದ ಅಗತ್ಯತೆಯಿರಲಿಲ್ಲ. ರಕ್ಷಣೆ ಹೊಂದಬೇಕಾದರೆ ಮಾನವನು ಏನು ಮಾಡಬೇಕು ಎಂಬುದಕ್ಕೆ ಆತನು ಒಂದು ಉದಾಹರಣೆಯಾಗಿರಲಾರನು. ಅಂದರೆ ದೇವರ ಬಗ್ಗೆ ಬೋಧಿಸಲ್ಪಡುವ (ಯೋಹಾನ 6:45), ನಂಬುವ (ಯೋಹಾನ 3:16), ಮಾನಸಾಂತರ ಪಡುವ (ಅಪೊಸ್ತಲರ ಕೃತ್ಯ 17:30), ಅರಿಕೆ ಮಾಡುವ (ರೋಮಾಪುರ 10:10) ಹಾಗೂ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದುವ (ಮಾರ್ಕ 16:16; ಅಪೊಸ್ತಲರ ಕೃತ್ಯ 2:38; 22:16; 1 ಪೇತ್ರ 3:21) ಅವಶ್ಯಕತೆ ಆತನಿಗಿಲ್ಲ. ಇವು ಪಾಪಿಗಳಿಗಾಗಿರುವ ಅಗತ್ಯತೆಗಳು. ನಿಷ್ಕಲಂಕವಾಗಿರುವವರಿಗೆ ಅಲ್ಲ, ನಿಷ್ಕಪಟವಾದ ಮಕ್ಕಳಿಗಾಗಿ ಇಲ್ಲವೇ ನಿಷ್ಕಲಂಕವಾದ ದೇವರ ಕುಮಾರನಿಗೆ ಅಲ್ಲ. ನಮ್ಮಿಂದ ಬೇಕಾದದ್ದು ಎಲ್ಲವೂ ಯೇಸುವಿನ ಉದಾಹರಣೆಯಲ್ಲಿ ಒಳಗೊಂಡಿದ್ದರೆ, ಮೇಲೆ ಹೇಳಿದ ಸಂಗತಿಗಳನ್ನು ನಾವು ಮಾಡುವ ಅಗತ್ಯತೆಯಿರುವದಿಲ್ಲ; ಯಾಕಂದರೆ ಆತನು ಅವುಗಳಲ್ಲಿ ಯಾವುದನ್ನೂ ಮಾಡಲಿಲ್ಲ. ಹೀಗಿದ್ದರೂ ನಾವು ಪಾಪಿಗಳಾಗಿದ್ದೇವೆ ಮತ್ತು ನಮ್ಮ ಪಾಪಗಳು ಕ್ಷಮಿಸಲ್ಪಡಲಿಕ್ಕಾಗುವಂತೆ ಆತನು ಮಾಡಲಿಕ್ಕೆ ಅವಶ್ಯಕತೆಯಿಲ್ಲದ ಸಂಗತಿಗಳನ್ನು ನಾವು ಮಾಡುವ ಅವಶ್ಯಕತೆಯಿದೆ. ಆತನು ಮಾಡಿದ್ದರಲ್ಲಿ ನಾವು ಮಾಡಬೇಕಾದ ಎಲ್ಲವೂ ಒಳಗೊಂಡಿರದಿದ್ದರೆ, ನಮ್ಮ ಪಾಪಗಳು ಕ್ಷಮಿಸಲ್ಪಡುವದಕ್ಕಾಗಿ ನಾವು ಮಾಡಬೇಕಾದ ಎಲ್ಲವುಗಳ ಉದಾಹರಣೆ ಆತನಾಗಿರುವದಿಲ್ಲ.

ಮಕ್ಕಳಿಗೆ ಬಾಪ್ತಿಸ್ಮ ಕೊಡಲು ಹನ್ನೆರಡು ವರ್ಷ ವಯಸ್ಸನ್ನು ಕೆಲವರು ಆಯ್ಕೆ ಮಾಡುತ್ತಾರೆ. ಯಾಕಂದರೆ ಆ ವಯಸ್ಸಿನಲ್ಲಿ ಯೇಸು ದೇವಾಲಯದಲ್ಲಿ ಬೋಧಿಸಲು ಪ್ರಾರಂಭಿಸಿದನು. "ಎಲ್ಲಾ ಸಂಗತಿಗಳಲ್ಲಿ ಆತನು ನಮ್ಮ ಉದಾಹರಣೆಯಾಗಿದ್ದಾನೆ ಎಂಬುದು ಸತ್ಯವಾಗಿದೆ" ಎಂದು ಆಲ್ಲೆನ್ ಬರೆದಿದ್ದಾನೆ.[4] ಯೇಸುವು ಎಲ್ಲಾ ಸಂಗತಿ ಗಳಲ್ಲಿ ಮಾದಿರಿಯಾಗಿದ್ದಾರೆ, ಚಿಕ್ಕ ಮಕ್ಕಳು ಹನ್ನೆರಡು ವರ್ಷ ಪ್ರಾಯದವರಾಗಿರುವಾಗ ದೇವರಿಗಾಗಿ ಸೇವೆಯನ್ನು ಹುಡುಕಬೇಕು. ಆದರೆ ಬಾಪ್ತಿಸ್ಮ ಹೊಂದಲು ಮೂವತ್ತು ವರ್ಷ ಪ್ರಾಯದವರಾಗುವವರೆಗೆ ಕಾಯಬೇಕು (ಲೂಕ 3:21-23) ಮತ್ತು ಆಗ ದೇವರಿಗಾಗಿ ಸೇವೆ ಪ್ರಾರಂಭಿಸಬೇಕು. ಆ ಕಾರ್ಯವು ದೇವರಿಗೆ ವಿಧೇಯತೆಯ ಕೇವಲ ಉದಾಹರಣೆಯಾಗಿದ್ದರೆ, ಆಗ ಮೂವತ್ತು, ಒಬ್ಬನು ಬಾಪ್ತಿಸ್ಮ ಹೊಂದಿ ದೇವರಿಗೂ ಸೇವೆಪ್ರಾರಂಭಿಸುವ ವಯಸ್ಸಿನ ಉದಾಹರಣೆ ಯಾಗಿರುವದಲ್ಲವೇ?

## ಮುಕ್ತಾಯ

ಬಾಪ್ತಿಸ್ಮ ಹೊಂದುವದರಿಂದ ಯೇಸುವು ಯೋಹಾನನಿಗೆ ತನ್ನ ಮೆಸ್ಸೀಯತ್ವವನ್ನು ಪ್ರಕಟಿಸಿದನು ಮತ್ತು ಯೋಹಾನನು ದೇವರ ನಿಜವಾದ ಪ್ರವಾದಿಯೆಂದು ಸಾಕ್ಷಿ ಕೊಟ್ಟನು. ಯಾವದೇ ಮನುಷ್ಯನು ಎಂದೂ ಪೂರೈಸದ ರೀತಿಯಲ್ಲಿ ದೇವರ ಎಲ್ಲಾ ನೀತಿಯ ಬೇಡಿಕೆ ಗಳನ್ನು ಕೈಕೊಳ್ಳುವಲ್ಲಿ ಯೇಸು ಮುಂದುವರಿದಂತೆ ಈ ಒಂದು ನೀತಿಯ ಕಾರ್ಯಕ್ಕೆ ಆತನು ವಿಧೇಯನಾದನು. ನೀತಿಯನ್ನು ಪೂರೈಸುವದಕ್ಕಾಗಿ ಮಾತ್ರವೇ ಯೇಸು ಜೀವಿಸಿದನು.

ಮನುಷ್ಯನು ನೀತಿಯಿಲ್ಲದ ಪಾಪಿಯಾಗಿದ್ದು ನೀತಿವಂತನಾಗಲು ಬಾಪ್ತಿಸ್ಮ ಹೊಂದಬೇಕು. ಯೇಸುವಿನ ಬಾಪ್ತಿಸ್ಮವು ವಿಧೇಯತೆಯ ಉದಾಹರಣೆಯಾಗಿದೆ. ಆದರೆ ರಕ್ಷಣೆಯನ್ನು, ಪಾಪಗಳ ಕ್ಷಮಾಪಣೆಯನ್ನು ಹೊಂದುವದಕ್ಕೆ ಉದಾಹರಣೆ ಯಾಗಿರುವದಿಲ್ಲ.

ಯೇಸುವಿಗೆ ಅನ್ವಯಿಸಿದ ಯೋಹಾನನ ಬಾಪ್ತಿಸ್ಮದಲ್ಲಿ ಪ್ರತಿಯೊಂದು ಒಳಗೊಂಡಿರದಿದ್ದರೂ ಯೋಹಾನನ ಬಾಪ್ತಿಸ್ಮದಲ್ಲಿ ಒಳಗೊಂಡಿದ್ದ ವಿಧೇಯತೆಯು ಆತನಿಗೆ ಅನ್ವಯಿಸಲ್ಪಟ್ಟಿತ್ತು. ಆದುದರಿಂದ ತನಗೆ ಅನ್ವಯಿಸಲ್ಪಟ್ಟ ಸಂಗತಿಯನ್ನು ಪೂರೈಸಲು ಯೇಸು ಬಾಪ್ತಿಸ್ಮ ಹೊಂದಿದನು. ಈ ರೀತಿಯಲ್ಲಿ ದೇವರ ಎಲ್ಲಾ ನೀತಿಯ ಬೇಡಿಕೆಗಳನ್ನು ಕೈಕೊಳ್ಳಲು ತನ್ನ ಪ್ರಯತ್ನವನ್ನು ಮುಂದುವರಿಸಿದನು.

---

ಟಿಪ್ಪಣಿಗಳು

[1]*Let Your Kingdom Come* (n.p.: Watchtower Bible and Tract Society of Pennsylvania, 1981), 69. [2]Jimmy Allen, *Rebaptism?* (West Monroe, La.: Howard Publishing Co., 1991), 46. [3]Ibid., 48. [4]Ibid.

© 2009 Truth for Today